ಮೈಸೂರು ಜಿಲ್ಲೆಯಲ್ಲಿ ಹೊಸ ಕಾರ್ಖಾನೆಗಳು

270 (266): ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮೈಸೂರು ಜಿಲ್ಲೆಯಲ್ಲಿ ಹೊಸದಾಗಿ ಸ್ಥಾಪಿಸುತ್ತಿರುವ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳ ವಿವರ ತಿಳಿಸುವುದು.

ಆ) ಈ ಕೈಗಾರಿಕೆಗಳಲ್ಲಿ ಎಷ್ಟು ಮಂದಿ ಕಾರ್ಮಿಕರ ಕೆಲಸ ನಿರ್ವಹಿಸಲು ಅವಕಾಶವಿದೆ:

ಇ) ಈ ಉದ್ದೇಶಿತ ಕೈಗಾರಿಕೆಗಳಲ್ಲಿ ಸ್ಥಳೀಯರಿಗೆ, ಕನ್ನಡಿಗರಿಗೆ ಹೆಚ್ಚಿನ ಅವಕಾಶ ಕಲ್ಪಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ, ವಿವರ ನೀಡುವುದು?

ಶ್ರೀ ಆರ್.ವಿ.ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :

ಅ) 1. ಪಟ್ಟಾಭಿ ಎಂಟರ್‌ಪ್ರೈಸಸ್, ಮೈಸೂರು
2. ಸ್ಪೆಸಿಲೈಸರ್ಡ್ ಪೋಸಸ್ ಇನುವೇಷನ್ ಪ್ರೈ ಲಿ:
3. ದೇವ್ ಪವರ್ ಕಾರ್ಪೋರೇಶನ್ ಮೈಸೂರು
4. ಡೆಕೊಪೋರ್ಜ್ ಪ್ರೈ ಲಿ: ತಾಂಡ್ಯ ಮೈಸೂರು
5. ಪಂಕಜ್ ಮಾನಸಿಂಗ್ ಎಂ.ದೊರೆ ತಾಂಡ್ಯ, ಕೈಗಾರಿಕಾ ಪ್ರದೇಶ
6. ಪ್ಲೇರ್ ಗಾರ್ಮೆಂಟ್ಸ್ ಪ್ರೈ ಲಿ: ತಾಂಡ್ಯ ಕೈಗಾರಿಕಾ ಪ್ರದೇಶ
7. ಸೆಂಟ್ ಜೋಸೆಫ್ ಪಾಲಿಮರ್ಸ್ ಪ್ರೈ ಲಿ., ಮೈಸೂರು
8. ಮಾರಿಸ್ ಸ್ಪಿನ್ನರ್ಸ್ ಕಟ್ರೆ ಮಳವಾಡಿ, ಹುಣಸೂರು ತಾಲ್ಲೂಕು.
9. ಶ್ರೀ ರಾಯಲ್ ಸೀಮಾ ಹಜ್ ಕಾಫಿಲ್ ಬೋ.ಲಿ: ಮೈಸೂರು

ಆ) ಈ ಕೈಗಾರಿಕೆಗಳಲ್ಲಿ ಒಟ್ಟು 1820 ಮಂದಿಗೆ ಕೆಲಸ ನಿರ್ವಹಿಸಲು ಅವಕಾಶವಿದೆ.

ಇ) ಉದ್ದೇಶಿತ ಕೈಗಾರಿಕೆಗಳಲ್ಲಿ ಸ್ಥಳೀಯರಿಗೆ ಕನ್ನಡಿಗರಿಗೆ ಹೆಚ್ಚಿನ ಅವಕಾಶ ಕಲ್ಪಿಸಲು ಡಾ: ಸರೋಜಿನ ಮಹಿಷಿ ವರದಿ ಪ್ರಕಾರ ಸಿ ಮತ್ತು ಡಿ ಗುಂಪಿನ ಕೆಲಸಗಾರರಿಗೆ ಶೇ. 100 ರಷ್ಟು ಕನ್ನಡಿಗರನ್ನು ನೇಮಿಸಿಕೊಳ್ಳಲು ಘಟಕಗಳಿಗೆ ಪರವಾನಿಗೆ ನೀಡುವಾಗ ತಿಳಿಸಲಾಗುತ್ತಿದೆ. ಹಾಗೂ ಘಟಕವು ಪ್ರಾರಂಭವಾದ ನಂತರ ಘಟಕವು ಸ್ಥಳೀಯರಿಗೆ ಕೆಲಸ ನೀಡಿರುವ ಬಗ್ಗೆ ಪರಿಶೀಲಿಸಿ ಸರ್ಕಾರಿ ಆದೇಶದ ಪ್ರಕಾರ ಶೆ. 100 ರಷ್ಟು ಸಿ ಮತ್ತು ಡಿ. ಗುಂಪಿನ ನೌಕರರಿಗೆ ನೀಡಲು ಹಾಗೂ ಒಟ್ಟು ಕೆಲಸಗಾರರ ಪೈಕಿ ಶೇ. 80 ರಷ್ಟು ಕನ್ನಡಿಗರನ್ನು ನೇಮಿಸಲು ಮನವರಿಕೆ ಮಾಡಲಾಗುತ್ತಿದೆ.ಡಾ: ಸರೋಜಿನಿ ಮಹಿಷಿ ವರದಿಯ ಅನುಷ್ಠಾನದ ಬಗ್ಗೆ ಪರಿವೀಕ್ಷಿಸಲು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿದ್ದು ಕಾಲಕಾಲಕ್ಕೆ ಪರಿಣಾಮಕಾರಿಯಾಗಿ ಅನುಷ್ಠಾನವಾಗುತ್ತಿರುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ರಾಜ್ಯದಲ್ಲಿ ಹಾಲಿನ ವ್ಯವಹಾರ

271 (269): ಶ್ರೀ ಶಂಕರಲಿಂಗೇಗೌಡ. ಹೆಚ್.ಎಸ್. (ಚಾಮರಾಜ) ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹೊರ ರಾಜ್ಯದ ಯಾವ ಯಾವ ಕಂಪನಿಗಳ ಯಾವ ಯಾವ ಹೆಸರಿನ ಹಾಲನ್ನು ಕರ್ನಾಟಕದಲ್ಲಿ ಮಾರಾಟ ಮಾಡಲಾಗುತ್ತಿದೆ?

ಅ) ಅವುಗಳ ಪೈಕಿ ಯಾವ ಯಾವ ಹೆಸರಿನ ಹಾಲು ದಿನನಿತ್ಯ ಎಷ್ಟೆಷ್ಟು ಲೀಟರ್ ಮಾರಾಟವಾಗುತ್ತಿದೆ?

ಇ) ನಂದಿನಿ ಹಾಲು ರಾಜ್ಯದಾದ್ಯಂತ ಪ್ರತಿನಿತ್ಯ ಎಷ್ಟು ಲೀಟರ್ ಮಾರಾಟವಾಗುತ್ತಿದೆ;

ಈ) ಹೊರರಾಜ್ಯದ ಹಾಲಿನ ಗುಣಮಟ್ಟದ ಬಗ್ಗೆ ದೂರುಗಳಿದ್ದು, ಆ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ; ವಿವರ ನೀಡುವುದು?

ಶ್ರೀ ಎಂ. ಮಹದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು) :

ಅ) ಕರ್ನಾಟಕ ರಾಜ್ಯದಲ್ಲಿ ಈ ಕೆಳಕಂಡ ಹೊರ ರಾಜ್ಯದ ಪ್ರಮುಖ ಕಂಪನಿಗಳು, ತಮ್ಮ ಕಂಪನಿ ಬ್ರಾಂಡ್‌ನ ಹೆಸರಿನಲ್ಲಿ ಹಾಲನ್ನು ಮಾರಾಟ ಮಾಡುತ್ತಿದೆ.

ಹೆರಿಟೇಜ್, ಆರೋಗ್ಯ, ನೀಲಗಿರೀಸ್, ಸ್ವಸ್ತಿಕ್, ದೊಡ್ಲ, ಕೆ.ಸಿ.ಎ., ಜರ್ಸಿ, ಶಿವಶಕ್ತಿ, ತಿರುಮಲ, ದೂದ್‌ಪಂಡರಿ, ಶೃತಿ, ನ್ಯಾಚುರಲ್‌ರಿಚ್, ಗೋಮಾತಾ, ಡೈರಿಫ್ರೆಶ್ ಮತ್ತು ತೇಜ.

ಆ) ವಿವರಗಳನ್ನು ಅನುಬಂಧ– 1 ರಲ್ಲಿ ನೀಡಲಾಗಿದೆ.

ಇ) ರಾಜ್ಯದಾದ್ಯಂತ ಹಾಲಿ ಪ್ರತಿನಿತ್ಯ ಸುಮಾರು 15.46 ಲಕ್ಷ ಲೀಟರ್ ಗಳಷ್ಟು ನಂದಿನಿ ಹಾಲು ಮಾರಾಟವಾಗುತ್ತಿದೆ.

ಈ) ಕಲಬೆರಕೆ ಹಾಲನ್ನು ತಡೆಗಟ್ಟಲು ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಕರ್ನಾಟಕ ಸರ್ಕಾರ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ದಿನಾಂಕ : 25.7.2003ರಲ್ಲಿ ನಡೆದ ಸಭೆಯಲ್ಲಿ ಒಂದು ಸಮಿತಿಯನ್ನು ರಚಿಸಲಾಗಿದೆ ಈ ಸಮಿತಿಯಲ್ಲಿ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರ ಅಧ್ಯಕ್ಷತೆಯಲ್ಲಿ, ಜಿಲ್ಲಾಧಿಕಾರಿಗಳು (ಬೆಂಗಳೂರು ನಗರ ಮತ್ತು ಗ್ರಾಮಾಂತರ) ಪೊಲೀಸ್, ಸಾರಿಗೆ, ಬೆಂಗಳೂರು ನಗರ ಪಾಲಿಕೆಯ ಆರೋಗ್ಯಾಧಿಕಾರಿಗಳು ಹಾಗೂ ಪಶುಪಾಲನಾ ಇಲಾಖೆಯ ಪ್ರತಿನಿಧಿಗಳನ್ನೊಳಗೊಂಡಿರುತ್ತದೆ. ಈ ಸಮಿತಿಯು ರಾಜ್ಯದಲ್ಲಿ ಕಲಬೆರಕೆ ಹಾಲಿನ ಸರಬರಾಜು ಮತ್ತು ವ್ಯಾಪಾರ ತಡೆಗಟ್ಟುವ ಮೇಲ್ವಿಚಾರಣೆ ಮಾಡುತ್ತಿದೆ. ಮಹಾನಗರ ಪಾಲಿಕೆಯ ಅಧಿಕಾರಿಗಳು ಹಾಗೂ ನಗರ ಪುರಸಭೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಆರೋಗ್ಯ ಪರೀಕ್ಷಕರು ಆಗಿಂದಾಗ್ಗೆ ಹಾಲಿನ ಮಾದರಿ ಸಂಗ್ರಹಿಸಿ ಪರಿವೀಕ್ಷಣಾ ಮಾಡಿ ವಿಶ್ಲೇಷಣೆಗೊಳಪಡಿಸಿ ಕಲಬೆರಕೆಯೆಂದು ದೃಢೀಕರಿಸಲಪಟ್ಟ ಪ್ರಕರಣಗಳನ್ನು ಆಹಾರ ಕಲಬೆರಕೆ ಕಾಯ್ದೆಯಡಿಯಲ್ಲಿ ಮೊಕದ್ದಮೆಗಳನ್ನು ಹೂಡಲಾಗುತ್ತಿದೆ. ಇದುವರೆವಿಗೆ ಕೈಗೊಂಡ ಕ್ರಮಗಳ ವಿವರ ಈ ಕೆಳಕಂಡಂತಿದೆ.

ಕ್ರ. ಸಂ	ವರ್ಷ	ಸಂಗ್ರಹಿಸಿದ ಹಾಲಿನ ಮಾದರಿಗಳ ಸಂಖ್ಯೆ	ಕಲಬೆರಕೆ ಎಂದು ಕಂಡು ಬಂದ ಮಾದರಿಗಳು	ನಾಶಪಡಿಸಿದ ಹಾಲಿನ ಪ್ರಮಾಣ
1.	2000–01	79	35	–
2.	2001–02	46	30	30000 ಲೀ
3.	2002–03	69	33	–
4.	2003–04 (ಡಿಸೆಂಬರ್ 2003ರ ಅಂತ್ಯಕ್ಕೆ	38	20	10680 ಲೀ

ಅನುಬಂಧ-1

ಹೊರ ರಾಜ್ಯದ ಪ್ರಮುಖ ಕಂಪನಿಗಳು ದಿನನಿತ್ಯ ಕರ್ನಾಟಕದಲ್ಲಿ ಮಾರಾಟ ಮಾಡುತ್ತಿರುವ ಹಾಲಿನ ಪ್ರಮಾಣದ ವಿವರಗಳು

ಕ್ರ.ಸಂಖ್ಯೆ	ಕಂಪನಿಗಳ ಹೆಸರು	ಮಾರಾಟ ಮಾಡುವ ಹಾಲಿನ ಪ್ರಮಾಣ (ಲೀಟರ್‌ಗಳಲ್ಲಿ)
1.	ಹೆರಿಟೇಜ್	75000
2.	ಆರೋಗ್ಯ	65000
3.	ನೀಲಗಿರೀಸ್	35000
4.	ಸ್ವಸ್ಥಿಕ್	31000
5.	ದೊಡ್ಲ	21000
6.	ಕೆ.ಸಿ.ಎ.	11000
7.	ಜರ್ಸಿ	15000
8.	ಶಿವಶಕ್ತಿ	6000
9.	ತಿರುಮಲ	6000
10.	ದೂದ್ ಪಂಡರಿ	16000
11.	ಶೃತಿ	15000
12.	ನ್ಯಾಚುರಲ್ ರಿಚ್	17000
13.	ಗೋಮಾತಾ	5000
14.	ಡೈರಿ ಫ್ರೆಶ್	4500
15.	ತೇಜ	3500
16.	ಇತರೆ ಸಣ್ಣ ಕಂಪೆನಿಗಳು	70000
	ಒಟ್ಟು	396000

ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣವನ್ನು ಮೇಲದರ್ಜೆಗೇರಿಸುವುದು

272 (270): ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) ಮಾನ್ಯ ರೇಷ್ಮೆ, ಜವಳಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಹಾಗೂ ನಾಗರೀಕ ವಿಮಾನಯಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣವನ್ನು ಮೇಲ್ದರ್ಜೆಗೇರಿಸಬೇಕಾಗಲು ಅಗತ್ಯವಿರುವ ಭೂ ಸ್ವಾಧೀನ ಪ್ರಕ್ರಿಯೆ ಯಾವ ಹಂತದಲ್ಲಿದೆ;

ಆ) ಈ ವಿಮಾನ ನಿಲ್ದಾಣವನ್ನು ಮೇಲ್ದರ್ಜೆಗೇರಿಸಬೇಕೆಂಬ ಹಲವಾರು ವರ್ಷಗಳ ಮನವಿ ಈಡೇರಲು ಇನ್ನೂ ಯಾವ ಕ್ರಮ ಕೈಗೊಳ್ಳಬೇಕಾಗಿದೆ;

ಇ) ಈ ವಿಮಾನ ನಿಲ್ದಾಣವನ್ನು ಮೇಲ್ದರ್ಜೆಗೇರಿಸಲು ಉಂಟಾಗಿರುವ ತೊಡಕುಗಳ ಬಗ್ಗೆ ತಿಳಿಸುವುದು?